ವಾಣಿಜ್ಯ ಸಂಕೀರ್ಣ ಮಳಿಗೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ

೧೫೭೨. ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲು).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ನಗರ ಸಭೆಯವರು ಇದುವರೆವಿಗೂ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣಗಳ ಸಂಖ್ಯೆ ಎಷ್ಟು ? ಅವುಗಳನ್ನು ಯಾವ ಬಡಾವಣೆಗಳಲ್ಲಿ ನಿರ್ಮಿಸಲಾಗಿದೆ ?

ಆ) ಮೇಲ್ಕಂಡ ವಾಣಿಜ್ಯದ ಸಂಕೀರ್ಣಗಳಿಗಾಗಿ ವೆಚ್ಚವಾಗಿರುವ ಮೊತ್ತವೆಷ್ಟು (ಪ್ರತ್ಯೇಕ ವಿವರಗಳನ್ನೊದಗಿಸಂವುದು) ಅವುಗಳಿಂದ ನಗರ ಸಭೆಗೆ ತಿಂಗಳೊಂದಕ್ಕೆ ಬರುತ್ತಿರುವ ಆದಾಯವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

೧) ಪಬ್ಲಿಕ್ ಯಾಂಟಿಲಿಟಿ ಕಟ್ಟಡ ಮಹಾತ್ಮಗಾಂಧಿ ರಸ್ತೆ, ಬೆಂಗಳೂರು.

೨) ಜಯನಗರದ ವಾಣಿಜ್ಯ ಸಂಕೀರ್ಣ, ಬೆಂಗಳೂರು.

೩) ರಾಜಾಜಿನಗರದ ಒಂದನೇ ಬಡಾವಣೆಯ ವಾಣಿಜ್ಯ ಸಂಕೀರ್ಣ, ಬೆಂಗಳೂರು.

೪) ಯಶವಂತಪುರದ ವಾಣಿಜ್ಯ ಸಂಕೀರ್ಣ, ಬೆಂಗಳೂರು.

೫) ಕಲಾಸಿಪಾಳ್ಯಂನಲ್ಲಿ ಸಗಟು ಮಾರುಕಟ್ಟೆ, ಬೆಂಗಳೂರು.

ವಾಣಿಜ್ಯ ಸಂಕೀರ್ಣಗಳ ವೆಚ್ಚ

ಅ) ೧.	ಪಬ್ಲಿಕ್ ಯಂಟಿಲಿಟಿ ಬಿಲ್ಡಿಂಗ್	ರೂ. ೨೨೪ ಲಕ್ಷ
೨.	ಜಯನಗರ ಮಾರುಕಟ್ಟೆ ಹಾಗೂ ವಾಣಿಜ್ಯ ಸಂಕೀರ್ಣ	ರೂ. ೨೫೮ ಲಕ್ಷ
೩.	ರಾಜಾಜಿನಗರದ ಒಂದನೇ ಬಡಾವಣೆಯ ವಾಣಿಜ್ಯ ಸಂಕೀರ್ಣ	ರೂ. ೧೨೫ ಲಕ್ಷ
೪.	ಯಶವಂತಪುರದ ವಾಣಿಜ್ಯ ಸಂಕೀರ್ಣ.	ರೂ. ೧೨೦ ಲಕ್ಷ
೫.	ಕಲಾಸಿಪಾಳ್ಯಂನಲ್ಲಿ ಸಗಟು ಮಾರುಕಟ್ಟೆ	ರೂ. ೧೨೫ ಲಕ್ಷ

ವಾಣಿಜ್ಯ ಸಂಕೀರ್ಣಗಳಿಂದ ತಿಂಗಳಿಗೆ ಬರುತ್ತಿರುವ ಆದಾಯ

ಅ) ೧.	ಪಬ್ಲಿಕ್ ಯುಟಿಲಿಟಿ ಕಟ್ಟಡ	ರೂ. ೩,೯೯,೨೧೨-೦೦
೨.	ಜಯನಗರ ಮಾರುಕಟ್ಟೆ ಹಾಗೂ ವಾಣಿಜ್ಯ ಸಂಕೀರ್ಣ	ರೂ. ೩,೩೮,೧೬೯-೦೦
೩.	ರಾಜಾಜಿನಗರ ಒಂದನೇ ಬಡಾವಣೆ ವಾಣಿಜ್ಯ ಸಂಕೀರ್ಣ	ರೂ. ೫೭,೧೮೨-೦೦
೪.	ಯಶವಂತಪುರದ ವಾಣಿಜ್ಯ ಸಂಕೀರ್ಣ	ರೂ. ೮೮,೪೫೦-೦೦
೫.	ಕಲಾಸಿಪಾಳ್ಯಂ ಸಗಟು ಮಾರುಕಟ್ಟೆ	ರೂ. ೧,೯೨,೩೧೨-೦೦

ಉತ್ತರ ಕನ್ನಡ ಜಿಲ್ಲೆಯಲ್ಲಿ ಜನತಾ ಮನೆಗಳನ್ನು ಮಂಜೂರು ಮಾಡುವ ಬಗ್ಗೆ

೧೪೮೩. ಶ್ರೀ ಗೋಪಾಲ ಮುಕಂದ ಕಾನಡೆ (ಸಿರಸಿ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಮಂಜೂರಾಗಿರುವ ಜನತಾ ಮನೆಗಳ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರ ನೀಡುವುದು ?

ಆ) ಹರಿಜನ ಗಿರಿಜನರಿಗೆ ಮಂಜೂರಾಗಿರುವ ಮನೆಗಳು ಎಷ್ಟು ?

ಶ್ರೀ ಮೊಹಮ್ಮದ್ ಮೊಯೀನುದ್ದೀನ್ (ವಸತಿ ರಾಜ್ಯ ಸಚಿವರು),—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಡ್ಕೋ ಯೋಜನೆಯಡಿಯಲ್ಲಿ ಪ್ರಾರಂಭದಿಂದ ಇದುವರೆವಿಗೂ (೧೯೭೮ರಿಂದ ೧೯೮೪) ಮಂಜೂರಾಗಿರುವ ಮನೆಗಳ ಸಂಖ್ಯೆ ೧೨೩೭,

ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹರಿಜನ –ಗಿರಿಜನರಿಗೆ ಮಂಜೂರಾಗಿರುವ ಮನೆಗಳು ೧೨೬೯.

ಅನುಬಂಧ

	ತಾಲ್ಲೂಕು	ಮನೆಗಳ ಸಂಖ್ಯೆ
೧)	ಕಾರವಾರ	೯೮೯
೨)	ಅಂಕೋಲ	೯೬೨
೩)	ಕುಮಟಾ	೨೧೨೩
೪)	ಹೊನ್ನಾವರ	೨೦೭೫
೫)	ಬಟ್ಕಳ	೮೯೫
೬)	ಸಿರಸಿ	೮೧೭
೭)	ಸಿದ್ದಾಪುರ	೮೦೦
೮)	ಯಲ್ಲಾಪುರ	೬೭೧
೯)	ಮುಂಡಗೋಡ	೧೪೩೦
೧೦)	ಸೂಪ	೫೧೯
೧೧)	ಹಳಿಯಾಳ	೧೦೮೪
	ಒಟ್ಟು	೧೨೩೭

ಮುಖ್ಯಮಂತ್ರಿಗಳ ಭಾಷಣದ ಪ್ರತಿಗಳು

೧೮೦೬. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಮುಖ್ಯಮಂತ್ರಿಗಳ ವಿವಿಧ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಲಾಗಿದೆ ?

ಆ) ಪ್ರತಿ ಪುಸ್ತಕದ ಶೀರ್ಷಿಕೆ ಮುದ್ರಿತ ಪ್ರತಿಗಳ ಸಂಖ್ಯೆ ಹಾಗೂ ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ೧೯೮೫–೮೬, ೧೯೮೬–೮೭, ೧೯೮೭–೮೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಒಟ್ಟು ೧೫ ಭಾಷಣಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ.

ಆ) ಪ್ರತಿ ಪುಸ್ತಕದ ಶೀರ್ಷಿಕೆ ಮುದ್ರಿತ ಪ್ರತಿಗಳ ಸಂಖ್ಯೆ ಹಾಗೂ ತಗಲಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.